# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ. ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | : | 1232 |
| ಉತ್ತರ ದಿನಾಂಕ | : | 29.12.2022 |
| ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಜಲಜೀವನ್ ಮಿಷನ್‌ನ ಯೋಜನೆಯ ಧ್ಯೇಯೋದ್ದೇಶವೇನು; ರಾಜ್ಯದಲ್ಲಿ ಜಲ ಜೀವನ್ ಮಿಷನ್ ಯೋಜನೆಯ ಯಾವ ಹಂತದಲ್ಲಿದೆ; (ಸಂಪೂರ್ಣವಾದ ಮಾಹಿತಿ ನೀಡುವುದು) | **"ಜಲ ಜೀವನ ಮಿಷನ್" ಯೋಜನೆಯ ಉದ್ದೇಶ ಹಾಗೂ ರೂಪರೇಷಗಳು:**<br>1. ಗ್ರಾಮೀಣ ಕುಟುಂಬಗಳ ಪ್ರತಿ ವ್ಯಕ್ತಿಗೆ ಪ್ರತಿ ದಿನ 55 LPCDಯಂತೆ ಕಾರ್ಯಾತ್ಮಕ ನಳ ನೀರು ಸಂಪರ್ಕ ( Functional Household Tap Connection ) ಒದಗಿಸುವುದು.<br>2. ಶಾಲೆ, ಅಂಗನವಾಡಿ ಕೇಂದ್ರಗಳು, ಗ್ರಾಮ ಪಂಚಾಯತ್ ಕಟ್ಟಡಗಳು, ಆರೋಗ್ಯ ಕೇಂದ್ರಗಳು, ಪೋಷ್ಠಿಕ ( Wellness) ಕೇಂದ್ರಗಳು ಮತ್ತು ಸಮುದಾಯ ಕಟ್ಟಡಗಳಿಗೆ ನಳ ನೀರು ಸಂಪರ್ಕವನ್ನು ಒದಗಿಸುವುದು.<br>3. ನಳ ಸಂಪರ್ಕಗಳ ಕಾರ್ಯವನ್ನು ಮೇಲ್ವಿಚಾರಣೆ ಮಾಡುವುದು.<br>4. ಸಮುದಾಯದಲ್ಲಿ ಸ್ವಯಂಪ್ರೇರಿತ ಸ್ಥಳೀಯ ಮಾಲೀಕತ್ವವನ್ನು ಉತ್ತೇಜಿಸಲು ಮತ್ತು ನಗದು ರೀತಿಯ/ಅಥವಾ ಸ್ವಯಂಪ್ರೇರಿತ ಕಾರ್ಮಿಕರ ಶ್ರಮದಾನದ ಕೊಡುಗೆಯನ್ನು ಖಚಿತಪಡಿಸುವುದು.<br>5. ನೀರು ಸರಬರಾಜು ವ್ಯವಸ್ಥೆಯ ಸುಸ್ಥಿರತೆಗೊಳಿಸಲು ಅಂದರೆ ನೀರಿನ ಮೂಲ, ನೀರು ಸರಬರಾಜು ಮೂಲಸೌಕರ್ಯ ಮತ್ತು ನಿಯಮಿತ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಸಮುದಾಯದ ವಂತಿಕೆ ಸಂಗ್ರಹಿಸುವುದು.<br>6. ಆದ್ಯತೆ ಮೇಲೆ ಕುಡಿಯುವ ನೀರಿನ ಗುಣಮಟ್ಟವನ್ನು ಆಧರಿಸಿ ಅಂತಹ ಪ್ರದೇಶಗಳಲ್ಲಿ, ಬರಪೀಡಿತ ಪ್ರದೇಶಗಳಲ್ಲಿ, ಸಂಸದರ ಆದರ್ಶ ಗ್ರಾಮ ಯೋಜನೆಯಲ್ಲಿನ ಮನೆಗಳಿಗೆ ನಳಗಳನ್ನು ಕಲ್ಪಿಸುವುದು.<br>7. ಕಲ್ಪಿಸಲಾಗಿರುವ ನಳಗಳಲ್ಲಿ ಕುಡಿಯುವ ನೀರು ಸರಬರಾಜಿನ ಬಗ್ಗೆ ಖಚಿತ ಪಡಿಸಿಕೊಳ್ಳುವುದು.<br>8. ಸುಸ್ಥಿರ ಕುಡಿಯುವ ನೀರು ವ್ಯವಸ್ಥೆ ಅಂದರೆ ನೀರಿನ ಮೂಲ, ಸರಬರಾಜಿನ ವ್ಯವಸ್ಥೆ ಮತ್ತು ನಿರ್ವಹಣೆಗೆ ಧನಮೂಲದ ಸಂಯೋಜನೆ.<br>9. ಈ ವ್ಯವಸ್ಥೆಗೆ ಬೇಕಾಗುವ ಮಾನವ ಸಂಪನ್ಮೂಲ ಅಭಿವೃದ್ಧಿ ಪಡಿಸುವುದು. ಇವುಗಳಲ್ಲಿ ಕಟ್ಟಡ ಕಾಮಗಾರಿ, ಕೊಳವೆ ಕೆಲಸ, ವಿದ್ಯುಚ್ಛಕ್ತಿ ಕಾಮಗಾರಿ, ನೀರಿನ ಗುಣ ನಿರ್ವಹಣೆ, ನೀರಿನ ಸಂಸ್ಕರಣೆ, ಜಲಮೂಲದ ಜಲಾನಯನ ರಕ್ಷಣೆ, ನೀರು ಸರಬರಾಜು ವ್ಯವಸ್ಥೆ ಮತ್ತು ನಿರ್ವಹಣೆಗಳನ್ನು ಅಲ್ಪಾವಧಿ ಮತ್ತು ದೀರ್ಘಾವಧಿಗೆ ಯೋಜಿಸುವುದು.<br>10. ಸೌಲಭ್ಯ ಪಡೆಯುವವರ ಭಾಗವಹಿಸುವಿಕೆಯೂ ಸೇರಿದಂತೆ ಸುರಕ್ಷಿತ ಕುಡಿಯುವ ನೀರಿನ ಮೌಲ್ಯ ಮತ್ತು ಹಲವಾರು ವಿಷಯಗಳಲ್ಲಿ ತಿಳುವಳಿಕೆ ಮೂಡಿಸುತ್ತಾ ಕುಡಿಯುವ ನೀರು ಪ್ರತಿಯೊಬ್ಬರಿಗೂ ಅವಶ್ಯವೆಂದು ತಿಳಿಸುವುದು.<br>ರಾಜ್ಯದಲ್ಲಿ ಜಲ ಜೀವನ್ ಮಿಷನ್ ಯೋಜನೆಯು ಆಗಸ್ಟ್ 2019 ರಿಂದ ಜಾರಿಗೆ ಬಂದಿದ್ದು, ಒಟ್ಟು 101.18 ಲಕ್ಷ ಗ್ರಾಮೀಣ ಮನೆಗಳ ಪೈಕಿ ಈವರೆಗೆ 59.63 ಲಕ್ಷ ಮನೆಗಳಿಗೆ ಕಾರ್ಯಾತ್ಮಕ ನಳ ನೀರು ಸಂಪರ್ಕ ಕಲ್ಪಿಸಲಾಗಿದೆ. |

| | | |
|---|---|---|
| ಆ) | ಜಲಜೀವನ್ ಮಿಷನ್ ಅನುಷ್ಠಾನದಲ್ಲಿ ಕೇಂದ್ರ ಸರ್ಕಾರದ ಜಲಶಕ್ತಿ ಇಲಾಖೆಯ ಮಾರ್ಗಸೂಚಿಯ ಪ್ರಕಾರ ಕೇಂದ್ರ ಸರ್ಕಾರದ ಪಾಲು ಶೇ.45% ರಾಜ್ಯ ಸರ್ಕಾರದ ಪಾಲು ಶೇ 45% ಹಾಗೂ ಫಲಾನುಭವಿಯ ಪಾಲು ಶೇ.10% ಎಂದಿದೆ. ಹದಿನೈದನೇ ಹಣಕಾಸು ಆಯೋಗದ ಅನುದಾನವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ಯೋಜನೆಗಳ ಪಾಲಿನ ಭಾಗವಾಗಿ ಬಳಸಬಾರದೆಂದು ಕೇವಲ ಪೂರಕವಾಗಿ ಬಳಸಬೇಕೆಂದು ಮಾರ್ಗ ಸೂಚಿಯಲ್ಲಿದೆ, ಮಾರ್ಗ ಸೂಚಿಯಲ್ಲಿದ್ದರೂ ಅನುದಾನವನ್ನು ಬಳಸುತ್ತಿರುವುದು ಯಾವ ಉದ್ದೇಶಕ್ಕಾಗಿ; (ಸಂಪೂರ್ಣವಾದ ಮಾಹಿತಿ ನೀಡುವುದು) | 15ನೇ ಹಣಕಾಸಿನ ಮಾರ್ಗಸೂಚಿಯನ್ವಯ ಪ್ರತಿ ಗ್ರಾಮ ಪಂಚಾಯಿತಿಗೆ ಹಂಚಿಕೆಯಾದ ಅನುದಾನದ ಶೇ.30ರಷ್ಟು ಅನುದಾನವನ್ನು ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಕಾಮಗಾರಿಗೆ ಕಾಯ್ದಿರಿಸಬೇಕಾಗಿರುತ್ತದೆ. ಅದರಂತೆ, ಈ ಹಿಂದ 15ನೇ ಹಣಕಾಸಿನಡಿ ಹಂಚಿಕೆಯಾದ ಅನುದಾನವನ್ನು ಜಲ ಜೀವನ್ ಮಿಷನ ಕಾಮಗಾರಿಗೆ ಉಪಯೋಗಿಸಲಾಗಿರುತ್ತದೆ. |
| ಇ) | ಹದಿನೈದನೇ ಹಣಕಾಸು ಆಯೋಗದ ಅನುದಾನದಲ್ಲಿ ಗ್ರಾಮ ಪಂಚಾಯತಿಗಳ ಹಣವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ವಿರುದ್ಧವಾಗಿ ರಾಜ್ಯ ಸರ್ಕಾರ ಜಲಜೀವನ್ ಮಿಷನ್ ಯೋಜನೆಗೆ ಬಳಸಿದೆ; ಸರ್ಕಾರ ಬಳಸಿರುವ ಹಣವನ್ನು ಗ್ರಾಮ ಪಂಚಾಯತಿಗಳಿಗೆ ಹಿಂದಿರುಗಿಸಲು ಯೋಚಿಸಿದೆಯೇ; ಇಲ್ಲದಿದ್ದಲ್ಲಿ ಬಳಸಿದ ಹಣವನ್ನು ಹಿಂದಿರುಗಿಸಲು ಸರ್ಕಾರವು ಯಾವ ಕ್ರಮ ಕೈಗೊಳ್ಳಲಾಗುವುದು)? (ಸಂಪೂರ್ಣವಾದ ಮಾಹಿತಿ ನೀಡುವುದು). | ದಿನಾಂಕ:04.08.2022ರ ಸುತ್ತೋಲೆಯಲ್ಲಿ ತಿಳಿಸಿದಂತೆ ವಿಸ್ತೃತ ಯೋಜನಾ ಪಟ್ಟಿ ಸಿದ್ಧಪಡಿಸುವಾಗ ಗ್ರಾಮಗಳಲ್ಲಿ 15ನೇ ಹಣಕಾಸಿನ ವಂತಿಗೆಯನ್ನು ಸಂಗ್ರಹಿಸದೆ ಇರಲು ಹಾಗೂ ಇಲ್ಲಿಯವರೆಗೆ ಸಂಗ್ರಹಿಸಿರುವ ವಂತಿಗೆಯ ಪೈಕಿ ಬಳಸದೇ ಇರುವ ಮೊತ್ತವನ್ನು ಆಯಾ ಗ್ರಾಮ ಪಂಚಾಯಿತಿಗೆ ಹಿಂದಿರುಗಿಸಲು ಕ್ರಮ ವಹಿಸಲು ಸೂಚಿಸಲಾಗಿದೆ. |

ಸಂ:ಗ್ರಾಕುನೀ&ನೈಇ 615 ಗ್ರಾನೀಸ(4)2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ